# ನಿಮ್ಮೊಡನೆ

ಸುನಿಲ್ ಗಾವಸ್ಕರ್, ರವಿ ಶಾಸ್ತ್ರಿ ಅವರಂಥ ಹಿರಿಯ ಆಟಗಾರರು ಈಗ ವೀಕ್ಷಕ ವಿವರಣೆಗಾರರಾಗಿದ್ದಾರೆ. ಅವರಾರೂ ಐಪಿಎಲ್‌ನಲ್ಲಿರುವ ನಕಾರಾತ್ಮಕ ಅಂಶಗಳ ಬಗ್ಗೆ ಮಾತನಾಡುವುದಿಲ್ಲ. ಯಾಕೆಂದರೆ ಅವರು ಹಣ ಪಡೆಯುತ್ತಿರುವುದು ಐಪಿಎಲ್ ಹೊಗಳಲು ಮಾತ್ರ. ಇಲ್ಲಿ ಕ್ರಿಕೆಟ್‌ನ ವೈಭವೀಕರಣಕ್ಕಷ್ಟೇ ಬೆಲೆ. ರಾಯಲ್ ಚಾಲೆಂಜರ್ಸ್ ತಂಡದ ಯಶಸ್ಸಿನಲ್ಲಿ ಮಹತ್ವದ ಪಾತ್ರ ವಹಿಸಿದ ವೆಸ್ಟ್ ಇಂಡೀಸ್‌ನ ಕ್ರಿಸ್ ಗೇಲ್ ಅಂತಹ ಒಂದೇ ಒಂದು ಆಟವನ್ನು ವಿಶ್ವಕಪ್‌ನಲ್ಲಿ ಆಡಿದ್ದರೆ ಆ ತಂಡ ಇನ್ನೂ ಉತ್ತಮ ಸಾಧನೆ ತೋರಬಹುದಿತ್ತು.



## ಐಪಿಎಲ್ ಕುರುಡುಪ್ರೇಮ

ನಮ್ಮಲ್ಲಿ ಎಲ್ಲವೂ ಅತಿ ಎನ್ನುವುದಕ್ಕೆ 'ಕ್ರಿಕೆಟ್' ಒಂದು ಉತ್ತಮ ಉದಾಹರಣೆ. ವಿಶ್ವಕಪ್ ಟೂರ್ನಿಯಲ್ಲಿ ಭಾರತ ಜಯಭೇರಿ ಬಾರಿಸಿದ ಕೆಲವೇ ದಿನಗಳಲ್ಲಿ ಆರಂಭವಾದ ಇಂಡಿಯನ್ ಪ್ರೀಮಿಯರ್ ಲೀಗ್ ಪಂದ್ಯಗಳಲ್ಲಿಯೂ ಜನರು ತೋರಿದ ಉತ್ಸಾಹ, ಬೆಂಬಲ ನೋಡಿದಾಗ, ಕ್ರಿಕೆಟ್ ಹುಚ್ಚು ಅತಿಯಾಯಿತು ಎಂದೆನಿಸುತ್ತದೆ. ಕ್ರಿಕೆಟ್ ಕೂಡ ಮಸಾಲಾ ಸಿನಿಮಾದಂತೆ ಒಂದು ಅಪ್ಪಟ ಮನರಂಜನೆಯ ಸಾಧನವಾಗಿ ಬದಲಾಗಿ ಹೋಗಿದೆ. ಇಲ್ಲಿ ಆಟದ ಕೌಶಲ ಅಥವಾ ಸಕಾರಾತ್ಮಕ ಅಂಶಗಳಿಗೆ ಹೆಚ್ಚು ಮಹತ್ವ ಇಲ್ಲ. ಚೆಂಡು ಇರುವುದು ಚಚ್ಚಲು, ಅದೂ ಬೌಂಡರಿ ಮತ್ತು ಸಿಕ್ಸರುಗಳ ರೂಪದಲ್ಲಿ. ಬೌಲರ್ ಹೊಡೆತ ತಿಂದಷ್ಟು ಪ್ರೇಕ್ಷಕರ ಹುಚ್ಚಾಟ ಹೆಚ್ಚುತ್ತದೆ. ಚುಟುಕು ಕ್ರಿಕೆಟ್ ಅಂದರೆ ಟ್ವೆಂಟಿ-20 ಕ್ರಿಕೆಟ್, ಬ್ಯಾಟು-ಚೆಂಡಿನ ಹೋರಾಟದ ಕಥೆಯೊಂದೇ ಅಲ್ಲ. ಅಲ್ಲಿ ಹಲವು ವಿಷಯಗಳು ವಿಜೃಂಭಿಸುತ್ತವೆ. ಗುಲಾಮಗಿರಿಯಲ್ಲೂ ಎಷ್ಟೊಂದು ಸಂತಸ ಇದೆ ಎಂದು ಜೇಬು ತುಂಬಿಸಿಕೊಂಡಿರುವ ಆಟಗಾರರು ಕುಣಿದಾಡುತ್ತ ಪ್ರದರ್ಶಿಸುತ್ತಾರೆ. ಆಟಗಾರರನ್ನು ಖರೀದಿಸಿರುವ ತಂಡಗಳ ಮಾಲೀಕರು ಐಪಿಎಲ್ ಕ್ರಿಕೆಟ್‌ನಂತಹ ವ್ಯಾಪಾರವೇ ಮತ್ತೊಂದಿಲ್ಲ ಎಂಬ ಸಂಭ್ರಮವನ್ನು ವ್ಯಕ್ತಪಡಿಸುತ್ತಾರೆ. ಈ ಬಾರಿಯ ವಿಶ್ವಕಪ್ ಕ್ರಿಕೆಟ್‌ನಲ್ಲಿ ಆಟಗಾರರ ದೇಶಾಭಿಮಾನ, ಆಟದ ಉತ್ತಮ ಅಂಶಗಳು ಹಾಗೂ ಕ್ರಿಕೆಟ್‌ನಲ್ಲಿ ಸಾಮಾನ್ಯವಾಗಿ ಇರಬೇಕಾದ ಶಿಸ್ತು- 50 ಓವರುಗಳ ಟೂರ್ನಿಯೇ ಚೆನ್ನ ಎಂಬುದನ್ನು ಎತ್ತಿ ತೋರಿಸಿದ್ದವು. ಭಾರತ ವಿಶ್ವ ಕಪ್ ಗೆದ್ದದ್ದು ಕ್ರಿಕೆಟ್ ವ್ಯವಸ್ಥಾಪಕರಿಗೆ ವರವಾಗಿಯೇ ಪರಿಣಮಿಸಿತು. ಅದಕ್ಕೆ ಸರಿಯಾಗಿ ಜನರು ಐಪಿಎಲ್ ಪಂದ್ಯಗಳನ್ನು ನೋಡುವಲ್ಲಿ ಹಿಂದೆ ಬೀಳಲಿಲ್ಲ.

ಆದರೆ ಈ ಐಪಿಎಲ್ ಕ್ರಿಕೆಟ್‌ನಲ್ಲಿ ಒಂದು ಅಪಾಯಕಾರಿ ಬೆಳವಣಿಗೆಯಂತೂ ಕಂಡುಬಂತು. ಆಟಗಾರರು ತಮ್ಮ ರಾಷ್ಟ್ರ ತಂಡಕ್ಕೆ ಆಡುವಾಗ ಪಡೆಯುವ ಹಣಕ್ಕಿಂತ ಹೆಚ್ಚಿನ ಮೊತ್ತವನ್ನು ಇಲ್ಲಿ ಪಡೆಯುತ್ತಾರೆ. ಸಹಜವಾಗಿಯೇ ಹಣದ ಮೋಹ ಅವರನ್ನು ತಮ್ಮ ರಾಷ್ಟ್ರ ತಂಡದಿಂದ ದೂರ ಇರುವಂತೆ ಮಾಡುವ ಸಾಧ್ಯತೆ ಇರುತ್ತದೆ. ಶ್ರೀಲಂಕಾದ ಲಸಿತ್ ಮಾಲಿಂಗ ಇಂಗ್ಲೆಂಡ್ ಪ್ರವಾಸದಿಂದ ದೂರ ಉಳಿದು ಐಪಿಎಲ್ ಪಂದ್ಯಗಳನ್ನಾಡಿದರು. ಭಾರತದ ಕೆಲವು ಆಟಗಾರರಿಗೂ ವೆಸ್ಟ್ಇಂಡೀಸ್ ಪ್ರವಾಸ ಕೈಕೊಳ್ಳುವ ಮನಸ್ಸು ಇದ್ದಂತಿಲ್ಲ. ವಿಶ್ವಕಪ್ ನಂತರ ಒಂದು ದಿನದ ಕ್ರಿಕೆಟ್‌ನಿಂದ ದೂರ ಉಳಿಯುವ ಇಂಗಿತ ವ್ಯಕ್ತಪಡಿಸಿದ್ದ ಸಚಿನ್ ತೆಂಡೂಲ್ಕರ್ ಈಗ ವೆಸ್ಟ್ಇಂಡೀಸ್ ಪ್ರವಾಸದಲ್ಲಿ ಟೆಸ್ಟ್ ಕೂಡ ಆಡಲು ಹೋಗುವುದಿಲ್ಲ. ಅವರಿಗೆ ವಿಶ್ರಾಂತಿ ಬೇಕು ಎಂಬುದರಲ್ಲಿ ಯಾರ ತಕರಾರೂ ಇರಲಿಕ್ಕಿಲ್ಲ. ಆದರೆ ಅವರು ಐಪಿಎಲ್‌ನ ಎಲ್ಲ ಪಂದ್ಯಗಳನ್ನು ಆಡುವ ಬದಲು ವಿಶ್ರಾಂತಿ ಪಡೆದು ವೆಸ್ಟ್ಇಂಡೀಸ್‌ಗೆ ಹೋಗಬಹುದಿತ್ತು. ಆದರೆ ಈ ಕ್ರಿಕೆಟ್ ಆಟಗಾರರನ್ನು ಪ್ರಶ್ನಿಸುವವರು ಯಾರು? ಅವರು ಆಡಿದ್ದೇ ಆಟವಾಗಿದೆ.

ಐಪಿಎಲ್ ಯಾವ ಯುವ ಆಟಗಾರನಿಗೂ ಒಂದು ಮಾದರಿಯಾಗುವುದಿಲ್ಲ. ಉತ್ತಮ ಮಟ್ಟದ ಕ್ರಿಕೆಟ್ ಆಡಬಯಸುವ ಹದಿವಯಸ್ಸಿನ ಆಟಗಾರರಿಗೆ ಯಾವ ತರಬೇತುದಾರನೂ ಚುಟುಕು ಕ್ರಿಕೆಟ್ ಹೊಡೆತಗಳನ್ನು ಹೇಳಿಕೊಡುವುದಿಲ್ಲ. ಒಂದು ವೇಳೆ ಈ ಯುವ ಆಟಗಾರರು ಟ್ವೆಂಟಿ-20 ಗುಂಗಿನಲ್ಲೇ ಕ್ರಿಕೆಟ್ ಅಭ್ಯಾಸ ಮಾಡಿದರೆ ಅವರಿಗೆ ಹೆಚ್ಚಿನ ಭವಿಷ್ಯ ಖಂಡಿತ ಇರುವುದಿಲ್ಲ.

ಸುನಿಲ್ ಗಾವಸ್ಕರ್, ರವಿ ಶಾಸ್ತ್ರಿ ಅವರಂಥ ಹಿರಿಯ ಆಟಗಾರರು ಈಗ ವೀಕ್ಷಕ ವಿವರಣೆಗಾರರಾಗಿದ್ದಾರೆ. ಆದರೆ ಯಾವೊಬ್ಬ ವೀಕ್ಷಕ ವಿವರಣೆಗಾರನೂ ಐಪಿಎಲ್‌ನಲ್ಲಿರುವ ನಕಾರಾತ್ಮಕ ಅಂಶಗಳ ಬಗ್ಗೆ ಮಾತನಾಡುವುದಿಲ್ಲ. ಯಾಕೆಂದರೆ ಅವರು ಹಣ ಪಡೆಯುತ್ತಿರುವುದು ಐಪಿಎಲ್ ಹೊಗಳಲು ಮಾತ್ರ. ಇಲ್ಲಿ ಕ್ರಿಕೆಟ್‌ನ ವೈಭವೀಕರಣಕ್ಕಷ್ಟೇ ಬೆಲೆ. ಬೆಂಗಳೂರಿನ ರಾಯಲ್ ಚಾಲೆಂಜರ್ಸ್ ತಂಡದ ಯಶಸ್ಸಿನಲ್ಲಿ ಮಹತ್ವದ ಪಾತ್ರ ವಹಿಸಿದ ವೆಸ್ಟ್ಇಂಡೀಸ್‌ನ ಕ್ರಿಸ್ ಗೇಲ್ ಅಂತಹ ಒಂದೇ ಒಂದು ಆಟವನ್ನು ವಿಶ್ವಕಪ್‌ನಲ್ಲಿ ಆಡಿದ್ದರೆ ಆ ತಂಡ ಇನ್ನೂ ಉತ್ತಮ ಸಾಧನೆ ತೋರಬಹುದಿತ್ತು. ಕ್ರಿಸ್ ಗೇಲ್ ಪಾಕಿಸ್ತಾನ ವಿರುದ್ಧದ ಸರಣಿಯಲ್ಲೂ ಆಡುವುದನ್ನು ಬಿಟ್ಟು ಐಪಿಎಲ್ ಪಂದ್ಯಗಳಿಗಾಗಿ ಭಾರತಕ್ಕೆ ಬಂದರು.

ಎಲ್ಲ ಕ್ರಿಕೆಟ್ ಆಟಗಾರರಿಗೂ ಹಣವೇ ಮುಖ್ಯವಾಗಿಬಿಟ್ಟಿದೆ ಎಂಬುದರಲ್ಲಿ ಅನುಮಾನವೇ ಇಲ್ಲ. ಐಪಿಎಲ್ ಎಂಬ ಮಾಯಾಬಜಾರ್‌ನಲ್ಲಿ ಆಟಗಾರರ 'ಎಲ್ಲ' ಅವಶ್ಯಕತೆಗಳೂ ಪೂರೈಕೆಯಾಗುತ್ತಿರುವುದರಿಂದ ಅದು ಅವರಿಗೆ ಚಿನ್ನದ ಮೊಟ್ಟೆ ಇಡುವ ಕೋಳಿಯಾಗಿದೆ. ಇದು ಜನರಿಗೂ ಗೊತ್ತಿದೆಯಾದರೂ ಕ್ರಿಕೆಟ್ ಮೇಲಿನ ಕುರುಡುಪ್ರೇಮ ವಿಜೃಂಭಿಸುತ್ತಿದೆ.

■ ಗೋಪಾಲಕೃಷ್ಣ ಹೆಗಡೆ